ಉ) ಪುಷ್ಪಕ್ ಸಾರಿಗೆ ಸೇವೆಯನ್ನು ನಗರಗಳಲ್ಲಿ ಕೊಡಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಿಗೆ ಇದನ್ನು ಕೊಡುವ ಪ್ರಸ್ತಾಪವಿಲ್ಲ.

ಊ) ಪುಷ್ಪಕ್ ಸೇವೆಯು ಸುಖಾಸೀನ ದರ್ಜೆಯದಾಗಿದ್ದು, ಅನೇಕ ಕಾಲ ಮತ್ತು ವೇಗ ಪ್ರಯಾಣ ಸೌಲಭ್ಯವನ್ನು ಒದಗಿಸುತ್ತಿದೆ ಮತ್ತು ದರವು ಹೆಚ್ಚಿನದಾಗಿದೆ. ಈ ಸೇವೆಯನ್ನು ನಗರಗಳಲ್ಲಿ ಮಾತ್ರ ಕೊಡಲಾಗುತ್ತಿದೆ. ದ್ವಿಚಕ್ರ ಗಾಡಿಗಳನ್ನು ಉಪಯೋಗಿಸುವವರು ಆಟೋದಲ್ಲಿ ಹೋಗುವ ಪ್ರಯಾಣಿಕರು ಮೊದಲಾದವರನ್ನು ಆಕರ್ಷಿಸಲು ಈ ಸೇವೆಯನ್ನು ಒದಗಿಸಲಾಗುತ್ತಿದೆ.

ಬೀದರ್ ಮತ್ತು ಔರಾದ್ ಇವು ನಗರಗಳೆಂದು ಪರಿಗಣಿಸಲಾಗಿಲ್ಲ. ಸದ್ಯ ಬೀದರ್ ಮತ್ತು ಔರಾದ್ ನಡುವೆ 46 ಟ್ರಿಪ್‌ಗಳು (23 ಸುತ್ತುವಳಿಗಳು) ಕಾರ್ಯಾಚರಣೆಯಾಗುತ್ತಿದೆ. ಅಲ್ಲದೆ ಒಂದು ತಡೆರಹಿತ ಬಸ್ಸು ಎಂಟು ಟ್ರಿಪ್‌ಗಳನ್ನು ಬೀದರ್ ಔರಾದ್ ನಡುವೆ ಮಾಡುತ್ತಿದೆ. ಈಗ ಕಾರ್ಯಾಚರಣೆಯಾಗುವ ಸಾರಿಗೆ ಸೇವೆಯು ಸಾಕಷ್ಟು ಪ್ರಮಾಣದಲ್ಲಿದೆ. ಆದ್ದರಿಂದ ಪುಷ್ಪಕ್ ಸೇವೆಯನ್ನು ಒದಗಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಪಯೋಗಕ್ಕೆ ಬಾರದೆ ಇರುವ ವಾಹನಗಳ ವಿಲೇವಾರಿ.

33-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993ನೇ ಡಿಸೆಂಬರ್ ಅಂತ್ಯಕ್ಕೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಉಪಯೋಗಕ್ಕೆ ಬಾರದೆ ಇರುವ ಸರ್ಕಾರಿ ವಾಹನಗಳ ಸಂಖ್ಯೆ ಎಷ್ಟು (ಇಲಾಖಾವಾರು ವಿವರ ನೀಡುವುದು)

ಆ) ಎಲ್ಲಾ ಇಲಾಖೆಗಳಲ್ಲಿ ನಾದುರಸ್ಥಿಯಲ್ಲಿರುವ ವಾಹನಗಳ ಅಂದಾಜು ಬೆಲೆ ಎಷ್ಟು?

ಇ) ವಿಲೇವಾರಿ ಮಾಡದೆ ಇರುವ ಕಾರಣ ಸರ್ಕಾರಕ್ಕೆ ನಷ್ಟವಾಗುವುದರಿಂದ ಅವುಗಳನ್ನು ಕೂಡಲೇ ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) 1. ವಾಣಿಜ್ಯ ತೆರಿಗೆ ಇಲಾಖೆ - 6
2. ಲೋಕೋಪಯೋಗಿ ಇಲಾಖೆ - 1
3. ಕೃಷಿ ಇಲಾಖೆ - 1
4. ಅರಣ್ಯ ಇಲಾಖೆ - 3
ಒಟ್ಟು 11 ವಾಹನಗಳು

ಆ) ರೂ. 3,86,000-00

ನಾದುರಸ್ತಿ ವಾಹನಗಳನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ

ರಸ್ತೆ ಸಾರಿಗೆಯ ಮಂಗಳೂರು ವಿಭಾಗದಲ್ಲಿ ಸಿಬ್ಬಂದಿಗಳ ಕೊರತೆ

35- ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗದಲ್ಲಿ ಎಷ್ಟು ಕಾರ್ಮಿಕರು ಮತ್ತು ತಾಂತ್ರಿಕ ಸಿಬ್ಬಂದಿಗಳ ಕೊರತೆ ಇದೆ.

ಆ) ಕೊರತೆಯನ್ನು ನೀಗಿಸಿ, ಸಿಬ್ಬಂದಿಗಳ ನೇಮಕ ಯಾವಾಗ ಮಾಡಲಾಗುವುದು.